Regd No B G 155 Sn

7—4—1965

# ಸತ್ಯವಾದಿ

48 th Year
Satyavadi
DAILY
MYSORE

ಸಂಸ್ಥಾಪಕರು — ಅಂಬಮನೆ ಸರಸ್ವೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಸಿರಂತ ಎಂ ಎಸ್ ಕೃಷ್ಣರಾವ್ 2¹ ಪೈಸೆ

(67) 2

### ಸರಕಾರಕ್ಕೆ ಗೊತ್ತು

ನವದೆಹಲಿ — ಪ್ರಧ್ಯನು ತಂಗತಿಯವರ ಕಷ್ಟಗಳು ಸರಕಾರಕ್ಕೆ ಅರಿವಾ ನಿದೆಯೆಂದೂ, ಇವರ ಜೀವನದ ಲೆಖ್ಖಾಚಾರವನ್ನು ಇನ್ನು 7-8 ತಿಂಗಳಲ್ಲಿ ತ ಥ್ಯಾರಿಸಲಾಗುವುದೆಂದೂ ವೊನ್ನೆ ಲೋಕಸಭೆಯಲ್ಲಿ ತಿಳಿಸಲಾಯಿತು.

ಂ ಂ ಂ

### ಏಷಿಟ್ನಾ ವಿಮಾನಲ್ಲಿ ಅಮೇರಿಕಾ ಕಾರ್ಯಾಚರಣೆ

ಸೈಗಾನ್ — ಉತ್ತರ ವಿಯಟ್ನಾಮಿನಲ್ಲಿನ ಮುಖ್ಯ ರೈಲು ಮಕ್ಕು ರಸ್ತೆ ಗಳನ್ನು ಅಮೇರಿಕಾ ವಿಮಾನಗಳ ಧಾಳಿಯಿಂದ ಪಾಳು ಮಾಡಿದರು - ಅಮೆರಿ ಕಾವು ಹನಾಯಾನಲ್ಲಿನ ವಿಮಾನ ನಿಲ್ದಾಣದ ಮೇಲೂ ಧಾಳಿ ನಡೆಸುವ ಸಂಭವ ವಿದೆ.

*

## ಸರ್ವರಿಗೂ ಸರ್ವ ಸ್ವತಂತ್ರ
## ಸ್ವತಂತ್ರ ಪಾರ್ಟಿಯಲ್ಲಿ !

ಕೇರಳದಲ್ಲಿ ಚುನಾವಣೆ ಆಗಿಹೋಯಿತು : ಅದ್ಯಾವ ಪಕ್ಷಗಳಿಂದಲೂ ಮಂತ್ರಿಮಂಡಲ ರಚಿಸಲು ಸಾಧ್ಯವಾಗಲಿಲ್ಲ : ಅದರ ಪರಿಣಾಮವಾಗಿ ಅಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯೇ ಮುಂದರಿಯುತ್ತಿದೆ.

ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಕಮ್ಯೂನಿಸ್ಟರು ಎದುರಿಸಿರುವಷ್ಟು ವ ತ್ಯಾರೂ ಎದುರಿಸಿಲ್ಲವೆನ್ನಬಹುದು ; ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲಾ ವೆಂಬುದೇ ಅವರ ಹೊಟ್ಟೆಯುರಿ.

ಕೆಲವು ಸ್ಥಳಗಳನ್ನು ಪಡೆದುಕೊಂಡಿರುವ ಕೇರಳ ಕಾಂಗ್ರೆಸ್ಸು ಹಾಗೂ ಸಂಯುಕ್ತ ಸಮಾಜವಾದಿ ಪಕ್ಷವೂ ಕೆಲವಂಟ್ಟಿಗೆ ಸ್ವರ ಎತ್ತಿರುತ್ತವೆ ; ಅ ದ ಕ್ಕಿಂದೇ ಒಂದು ಸ್ಥಾನ ಗಿಟ್ಟಿಸಿಕೊಂಡಿರುವ ಸ್ವತಂತ್ರ ಪಾರ್ಟಿ ಬಹಳ ಗಲಾಟೆ ಮಾಡಿರುತ್ತದೆ

ಎಲ್ಲಾ ವಿಷಯಗಳಲ್ಲೂ ಸ್ವತಂತ್ರ ಪಾರ್ಟಿಯ ಸದಸ್ಯರಿಗೆ ಸ್ವತಂತ್ರ ಇ ದ್ದೇ ಇರುತ್ತದೆ : ಅದು ಭಾಷಾ ಸಮಸ್ಯೆಯೇ ಆಗಲಿ, ಆಹಾರ ಸಮಸ್ಯೆಯೇ ಆಗಲಿ, ದೇಶರಕ್ಷಣೆಯ ವಿಷಯವೇ ಆಗಲಿ, ಎಲ್ಲರಿಗೂ ಒಂದೊಂದು ಅಭಿಪ್ರಾಯ ಅನಿಸಿರುತ್ತದೆ : ಹಾಗೆಯೇ ಕೇರಳದಲ್ಲಿ ಬಂದಿರುವ ರಾಷ್ಟ್ರಾಧ್ಯಕ್ಷರ ಆಡಳಿತದ ವಿಷಯದಲ್ಲಿಯೂ ಕೂಡ.

ಕೇರಳದಲ್ಲಿ ರಾಷ್ಟ್ರಾಧ್ಯಕ್ಷರಾಳ್ವಿಕೆಯು ಬಲಾತ್ಕಾರ ಹೇರುವಿಕೆಯನ್ನು ಅವರ ಮುಖಂಡ ಶ್ರೀ ರಂಗಾನಂದರು ಶಿಶುಹತ್ಯೆಯೆಂದೂ, ಪ್ರಜಾಪಭ ತ್ವದ ಗರ್ಭಶಾವವೆಂದೂ ಕರೆದಿದ್ದು, ಈ ದುರ್ಗಡತೆಗೆ ಗೃಹಮಂತ್ರಿ ಶ್ರೀ ನಂದಾರೇ ಕಾರಣವೆಂದು ದೆಟ್ಟವಾಡಿ ತೋರಿಸಿದ್ದಾರೆ : ಕೇಂದ್ರದ ತೀರ್ಮಾನವು ಸಂವಿ ಧಾನದ ತತ್ವಕ್ಕೇನೆ ಕೊಡಲಿ ಏಟೆಂದೂ ಅವರುಡಿದ್ದಾರೆ.

ಸ್ವತಂತ್ರ ಪಾರ್ಟಿಯ ಸದಸ್ಯ ಶ್ರೀ ಪಾಂಡೇಕರರವರು ಅಂತಹ ಭಾರೀ ಶಬ್ದಗಳನ್ನು ಉಪಯೋಗಿಸದಿದ್ದರೂ ಕೇಂದ್ರದ ಪರ್ತನೆಯು ಭಾರೀ ಸಂವಿಧಾ ನಾತ್ಮಕ ಅಸಿರ್ಧವರ್ತನೆ ಎಂದಿರುವರು.

[ ಹಿಂದಿನ ಪುಟದಲ್ಲಿ ಮುಂದುವರಿದಿದೆ ]

## ಭಾರತಕ್ಕೆ ರಷ್ಯಾ ಬೆಂಬಲ
## ಕಾಶ್ಮೀರ ವಿಚಾರದಲ್ಲಿ

ಮಾಸ್ಕೋ — ಪಾಕಿಸ್ತಾನ ಅಧ್ಯ ಕ್ಷ ಅಯೂಬರು ರಷ್ಯಾ ನಾಯಕರೊ ಡನೆ ನಡೆಸಿದ ಮಾತುಕತೆಯಲ್ಲಿ, ರಷ್ಯ ಭಾರತಕ್ಕೆ ಶಸ್ತ್ರಾಸ್ತ್ರ ಸಂಬಂಧಿಸಿ ನಿಲ್ಲಿಸಲು ಒಪ್ಪಲಿಲ್ಲ — ಕಾಶ್ಮೀರ ವಿ ವಾದದಲ್ಲಿ ರಷ್ಯ ಭಾರತದ ಪರದ ತನ್ನ ಹಿಂದಿನ ನಿಲುವನ್ನೇ ಪ್ರಕಟಪಡಿಸಿದೆ.

### ಷೇಕ್ ಅಬ್ದುಲ್ಲರ ವಿಚಾರದಲ್ಲಿ

ನವದೆಹಲಿ — ಷೇಕ್ ಅಬ್ದುಲ್ಲರಿಗೆ ಕೊಟ್ಟಿರುವ ಪಾಸ್‌ಪೋರ್ಟು ಹಾಜ ಯಾತ್ರೆ ಮುಗಿಸಲು 30 ನೇ ಎಪ್ರಿಲ್ ತನಕ ಮಾತ್ರ ಉಪಯುಕ್ತವೆಂದೂ ಅ ದರ ಮೇಲಿದ್ದ ಬೇರೆಬೇರೆ ದೇಶಗಳ ಭೇ ಟಿ ರದ್ದು ಪಡಿಸಲಾಗಿರುವುದೆಂದೂ ಅವ ತಿಳಿಸಲ್ಪಟ್ಟಿದೆ : ಪಾಕಿಸ್ತಾನದ ಭೇ ಟಿ ಗೂ ಅನುಮತಿ ನಿರಾಕರಿಸಲಾಗಿದೆ.

ಪಾಕಿಸ್ತಾನವು ಅಮೇರಿಕದಲ್ಲಿ ಕ್ರ ಕಟಿಸಿರುವ ಮ್ಯಾಪಿನಲ್ಲಿ ಕಾಶ್ಮೀರವಾಡದ ಒಂದು ಭಾಗ ಮತ್ತು ತಾನು ಅಕ್ರಮ ಸಿರುವ ಕಾಶ್ಮೀರ ಭಾಗವನ್ನು ತನ್ನದಾಗಿ ಕಾಣಿಸಿದೆ — ಭಾರತ ರಾಯಭಾರಿ ಆದನ್ನು ವಿರೋಧಿಸಿ ಸರಿಯಾದ ಪರಿಸ್ಥಿತಿ ಯನ್ನು ಪ್ರಕಟಿಸಿದ್ದಾರೆ

ಪಾಕಿಸ್ತಾನವು ಕಾಶ್ಮೀರದಲ್ಲಿನ ಭಾರತದ 2000 ಚದರು ಮೈಲಿ ಭೂಮಿಯನ್ನು ಚೀನಾಕ್ಕೆ ಗಡಿ ಒಪ್ಪಂದದಲ್ಲಿ ಕೊಟ್ಟಿದೆ

ಪಾಕಿಂಗ್ರೆಸ್ — ಭಾರತದ ವಿದೇಶೀ ಸಾಲವು ಮುಂದಿನ ವರ್ಷದೊಳಗೆ ಸು ಪಾರು 6 ಬಿಲಿಯಗಳಾಗುವುದೆಂದು ತಿ ವಿ ಡಿ ಪ್ರಕಟಿಸಿದೆ

### ಪಾರಭಟ

ಮೈಸೂರು — ಬಡ್ಜೆಟ್ ಪರ್ಯಾ ಲೋಚನೆಯ ಮುಂದುವರಿದ ವಿಾಟಿಂ ಗು ತಾ|| 8 ರಿಂದೂ ಆಡಳಿತ ವರದಿ ಪರ್ಯಾಲೋಚನೆಯ ಮುಂದುವರಿದ ವಿಾ ಟಿಂಗು ತಾ|| 9 ರಿಂದೂ ನಡೆಯುತ್ತವೆ.

### ವೈಸೂರು ರಾಜ್ಯದಲ್ಲಿ ನಿರಾಶ್ರಿತರು

ಬೆಂಗಳೂರು — ಮೈಸೂರು ರಾಜ್ಯ ಕ್ಕೆ ಬಂದಿರುವ ಪೂರ್ವ ಪಾಕಿಸ್ತಾನದ 300 ಪೂರ್ವ ಪಾಕಿಸ್ತಾನ ನಿರಾಶ್ರಿತ ಸಂಸಾರಂಗಳನ್ನು ಬೆಳಗಾಂ ಜಿಲ್ಲಾ ಹಿಡ್ಕಲ್ ಕ್ಯಾಂಪಿನಲ್ಲಿಡಲಾಗಿದೆ

### ಡೆಟಿನೂಗಳ ಸಂಸಾರಂಕ್ಕೆ

ತಿರುವೇಂಡ್ರಂ — ರಾಜ್ಯದಲ್ಲಿ ಸ್ಥಾನ ಬದ್ಧರಾಗಿರುವವರ ಸಂಸಾರಕ್ಕೆ ಮಾಸಾ ಶಯನ ಕೊಡಲು ಕೇರಳ ಸರಕಾರ ಮಂ ಜೂರ್ಮಾಡಿದೆ.

### ಪ್ರತಿಭಟನೆ

ಕಲ್ಲೀಕೋಟೆ — ಕೇರಳದಲ್ಲಿ ಅಧ್ಯ ಕ್ಷರ ಆಳ್ವಿಕೆಯನ್ನು ಪ್ರತಿಭಟಿಸಿ ರಾಜ್ಯ ದ ಮುಸ್ಲಿಂ ಲೀಗು 'ಸಮಿತಿ ನಿರ್ಣಯ ಮಾಡಿದೆ.

### ನಾಳೆಯ ಪಂಚಾಂಗ

ವೈಶಜ್ಞ ಶಿಖಾಮಣಿ
ಅಸ್ಥಾನಮಹಾವಿದ್ವಾ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ಯಸ್ಮಣಿ
ಸುಪಕ್ಕ ವೆಂಕಣ್ಣಜೋಯಿಸರಿಂದ
ಸಿದ್ಧಾಂತಾರ ಸಪ್ತಮಿ ಅರ್ಧಾ

ಕೇರಳದಲ್ಲಿ ಚುನಾವಣಾ ಪ್ರಚಾರಕ್ಕೆ ಹೋಗಿದ್ದ ಸ್ವತಂತ್ರ ಪಾರ್ಟಿಯ ಆಚಾರ್ಯರೂ ಶ್ರೀ ರಾಜಾಜಿಯವರು, ಕಾಂಗ್ರೆಸ್ಸಿನ ಕಳೇಬರವನ್ನು ನಾಶಪಡಿಸಲು ತಾವು ಬಯಸುವುದಾಗಿ ಹೇಳಿದ್ದರು : ಕಾಂಗ್ರೆಸ್ಸನ್ನು ನಾಶಮಾಡಲು ಸ್ವತಂತ್ರ ಪಾರ್ಟಿಗೆ ಸಾಧ್ಯವಾಗಿದೆಯೇ ? ಅದು ಸಾಧ್ಯವಾಗಿಲ್ಲವೆಂದೇ ಹಿಂದಿನ ಎಲ್ಲ ಚುನಾವಣೆಗಳೂ ಅವರಿಗೆ ಪ್ರಮಾಣೀಕರಿಸಿವೆ ; ತನ್ನ ಪಕ್ಷ ಅಲ್ಲಿ ಸ್ಥಾಪನೆ ಪಡೆಯದಿದ್ದರೂ ಚಿಂತೆಯಿಲ್ಲ, ಅದರ ಕಾಂಗ್ರೆಸು ಅಡಗಿಸಿಕೆ [ ನೇರ ಅರ್ಥ ಪಾಕಿಸ್ತಾನ್ ಪ್ರಧಾನ್ಯರ ಅಳಿವಿಕೆ ಎನ್ನುವ ಹೆಸರಿನಲ್ಲಿ ಪರೋಕ್ಷವಾಗಿಯಾದರೂ ] ಬರಬಾರದು.

ಸ್ವತಂತ್ರ ಪಾರ್ಟಿಯು ಶಾಸ್ತ್ರಿಯವರಾಗಲೀ ಪಾಕಿಸ್ತಾನ ಅಧ್ಯಕ್ಷ ಮಾತ್ರಕರ ಬಲ ಮುಂತಾದವರಿಗಿಂತ ಅಭಿರುಚಿಯಲ್ಲಿ ಅಲ್ಲದೆ ಮನೋಭಾವನೆಯಲ್ಲಿ ಹಾಗಿದೆಯಾದರೂ ಬಲ ಮುಖಂಡರು ಅಭಿರುಚಿಯಲ್ಲಿಯೂ ಬೇರೆಯೇ ಇದೆ : ಶ್ರೀ ಮುನ್ಷಿಯವರು ಕೇರಳದಲ್ಲಿ ರಾಷ್ಟ್ರಪ್ರಧಾನ್ಯರ ಆಳ್ವಿಕೆಯನ್ನು ಅಹುರಿಸಿದ್ದಾರೆ : ಅವರು ಇದು ಸಂಪೂರ್ಣ ಮಾನಿಫಾನಬದ್ಧವೆಂದಿದ್ದಾರೆ : ಕೇಂದ್ರ ಶಾಸನವು ತಳೆದಿರುವ ಅತ್ಯಂತ ಮಾನ್ಯತೆಯನ್ನೆಂದಿದ್ದಾರೆ ; ಅಲ್ಲದೆ ಪರಿಸ್ಥಿತಿಗನುಗುಣವಾಗಿ ಹೆಜ್ಜೆ ಇಡಬೇಕೆಂದೂ ಅವರಂದಿದ್ದಾರೆ.

[ ಹೌದಲ್ಲವೆ ! ಒಂದೇ ಪಕ್ಷದ [ ಪಕ್ಷವೆಂದರೆ ಅವರಿಗೆ ಅಪಮಾನವಾಗಿರಬಹುದು ಪಾರ್ಟಿ ಎನ್ನಬೇಕು ! ಅಂಗ್ಲಾ ವ್ಯಾಮೋಹಿಗಳಿಗೆ ಅದೇ ಸರಿ ಎಂದು ತಾತ್ಪರ್ಯ ] ಮುಂದಾಳುಗಳೊಳಗೆ ಎಷ್ಟು ವ್ಯತ್ಯಾಸ ! ಒಂದುವೇಳೆ ಇಂತಹವರು ಕೈಜಾರಿ ಅವಕಾಶವಾದಿ ಆಳ್ವಿಕೆಯು ಅಂಕುಶ ಸಿಕ್ಕಿದರೆ, ಸಂತೋಷವು ;

ಸರ್ವರಿಗೂ ಸರ್ವ ಸ್ವತಂತ್ರ ಇರುವ ಪಕ್ಷ [ ಅಥವಾ ಪಾರ್ಟಿ ]
ಸ್ವತಂತ್ರ ಪಾರ್ಟಿ.

— ಶಿವಶಂಕರ


ವುಡ್‌ಲಾಂಡ್ ಜಯಪ್ರದ 2 ನೇ ವಾರ

ಬೊಂಬಾಯಿನಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯದ್ಭುತ ಹಿಂದಿ ಚಿತ್ರ ರತ್ನ

ಬಹು ಬೇಟಿ ★ Bahu Beti

ತಾರಾ- ಅಶೋಕ್‌ಕುಮಾರ್, ವೈಜಯಂತಿಮಾಲಾ, ಜಾಯ್ ಮುಖರ್ಜಿ, ಪ್ರಾಣ್ ಮತ್ತಿತರರು

ಪ್ರತಿದಿನ 3 ಪ್ರದರ್ಶನಗಳು

ಆಪೆರಾ 2-4-65 ರಿಂದ

ಅದ್ಭುತ ಕನ್ನಡ ಚಿತ್ರ — ದಿನ 3 ಆಟಗಳು

ಪೂಜೆಕು ವಂದ ಮಲರ್

ತಾರಾಗಣ— ಜೆಮಿನಿ ಗಣೇಶ್, ಸಾವಿತ್ರಿ, ಮನೋರಮಾ, ಮುತ್ತುರಾಮ್

SHAKTI

SUDHA

A Superb Tonic



ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ




ಶಂಭುಲಿಂಗ ಚಿತ್ರದಲ್ಲಿ ಹಾಲಪ್ಪಜ್ಜಿ ಮೊಮ್ಮಗಳು


Edited, Printed & Published by the Proprietor
Dharma Prachara Niratа M S Krishna Rao
at the Satyavedi Press Gamarajapuram Mysore 4